# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಬೆಂಗಳೂರು

ಸಂಖ್ಯೆ : ಕರಾಸಾ/ಕೇಕ/ನೇಮಕ/ಸಿ2/ 1050 /10–11 ದಿನಾಂಕ : 20–09–2010

## ಜಾಹೀರಾತು ಸಂಖ್ಯೆ : 01/2010

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಖಾಲಿ ಇರುವ ದರ್ಜೆ–3ರ ಚಾಲಕ ಹಾಗೂ ಚಾಲಕ–ವ–ನಿರ್ವಾಹಕ ಹುದ್ದೆಗಳನ್ನು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರ ಪದವೃಂದ ಮತ್ತು ನೇಮಕಾತಿ ನಿಯಮಾವಳಿ 1982 ಮತ್ತು ತದನಂತರದ ತಿದ್ದುಪಡಿ ಆದೇಶಗಳ ಅನುಸಾರ ನೇರ ನೇಮಕಾತಿಯ ಮೂಲಕ ತುಂಬಲು ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ (ON LINE) ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿದ್ದು ನೇಮಕಾತಿ ಸಮಯದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಮಾರ್ಪಡಿಸಬಹುದಾಗಿರುತ್ತದೆ. ಕ ರಾ ರ ಸಾ ನಿಗಮದ ಯಾವುದೇ ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ಇಚ್ಛಿಸಿದಲ್ಲಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು, ಹುದ್ದೆಗಳ ಮೀಸಲಾತಿ ವರ್ಗೀಕರಣ ಈ ಕೆಳಕಾಣಿಸಿದಂತಿರುತ್ತದೆ.

| ಮೀಸಲಾತಿ | ಸಾಮಾನ್ಯ ನೇಮಕಾತಿಯ ಚಾಲಕ ಹುದ್ದೆಗಳ ವರ್ಗೀಕರಣ | | | | | | |
|---|---|---|---|---|---|---|---|
| | ಸಾಮಾನ್ಯ | ಮಹಿಳೆ | ಗ್ರಾಮೀಣ | ಮಾ ಸೈನಿಕ | ಕ ಮಾದ್ಯಮ | ಯೋ ನಿರಾಶ್ರಿತ | ಒಟ್ಟು |
| ಪ ಜಾ | 57 | 71 | 59 | 22 | 9 | 11 | **229** |
| ಪ ಪಂ | 10 | 14 | 12 | 4 | 2 | 2 | **44** |
| ಪ್ರವರ್ಗ–1 | 16 | 22 | 14 | 4 | 2 | 3 | **61** |
| 2ಎ | 58 | 70 | 54 | 24 | 10 | 11 | **227** |
| 2ಬಿ | 18 | 20 | 14 | 4 | 2 | 2 | **60** |
| 3ಎ | 19 | 16 | 18 | 4 | 2 | 2 | **61** |
| 3ಬಿ | 19 | 20 | 23 | 10 | 3 | 2 | **77** |
| ಸಾಮಾನ್ಯ | 192 | 227 | 190 | 72 | 39 | 38 | **758** |
| ಒಟ್ಟು | **389** | **460** | **384** | **144** | **69** | **71** | **1517** |

| ಮೀಸಲಾತಿ | ಸಾಮಾನ್ಯ ನೇಮಕಾತಿಯ ಚಾಲಕ–ವ–ನಿರ್ವಾಹಕ ಹುದ್ದೆಗಳ ವರ್ಗೀಕರಣ | | | | | | |
|---|---|---|---|---|---|---|---|
| | ಸಾಮಾನ್ಯ | ಮಹಿಳೆ | ಗ್ರಾಮೀಣ | ಮಾ ಸೈನಿಕ | ಕ ಮಾದ್ಯಮ | ಯೋ ನಿರಾಶ್ರಿತ | ಒಟ್ಟು |
| ಪ ಜಾ | 47 | 59 | 47 | 20 | 11 | 11 | 195 |
| ಪ ಪಂ | 12 | 11 | 12 | 3 | 1 | 1 | 40 |
| ಪ್ರವರ್ಗ–1 | 13 | 12 | 13 | 4 | 3 | 4 | 49 |
| 2ಎ | 46 | 58 | 53 | 16 | 10 | 7 | 190 |
| 2ಬಿ | 10 | 13 | 12 | 6 | 5 | 4 | 50 |
| 3ಎ | 13 | 16 | 12 | 6 | 4 | 2 | 53 |
| 3ಬಿ | 17 | 22 | 16 | 3 | 2 | 4 | 64 |
| ಸಾಮಾನ್ಯ | 158 | 191 | 160 | 63 | 32 | 34 | 638 |
| ಒಟ್ಟು | 316 | 382 | 325 | 121 | 68 | 67 | 1279 |

| ಮೀಸಲಾತಿ | ಹಿಂಬಾಕಿ ನೇಮಕಾತಿಯ ಚಾಲಕ ಹುದ್ದೆಗಳ ವರ್ಗೀಕರಣ | | | | | | |
|---|---|---|---|---|---|---|---|
| | ಸಾಮಾನ್ಯ | ಮಹಿಳೆ | ಗ್ರಾಮೀಣ | ಮಾ ಸೈನಿಕ | ಕ ಮಾದ್ಯಮ | ಯೋ ನಿರಾಶ್ರಿತ | ಒಟ್ಟು |
| ಪ ಜಾ | 55 | 63 | 53 | 23 | 11 | 11 | **216** |
| ಪ ಪಂ | 13 | 10 | 9 | 5 | 2 | 1 | **40** |
| ಒಟ್ಟು | **68** | **73** | **62** | **28** | **13** | **12** | **256** |

| ಮೀಸಲಾತಿ | ಹಿಂಬಾಕಿ ನೇಮಕಾತಿಯ ಚಾಲಕ–ವ–ನಿರ್ವಾಹಕ ಹುದ್ದೆಗಳ ವರ್ಗೀಕರಣ | | | | | | |
|---|---|---|---|---|---|---|---|
| | ಸಾಮಾನ್ಯ | ಮಹಿಳೆ | ಗ್ರಾಮೀಣ | ಮಾ ಸೈನಿಕ | ಕ ಮಾದ್ಯಮ | ಯೋ ನಿರಾಶ್ರಿತ | ಒಟ್ಟು |
| ಪ ಜಾ | 56 | 66 | 58 | 20 | 9 | 9 | **218** |
| ಪ ಪಂ | 10 | 12 | 10 | 3 | 1 | 2 | **38** |
| ಒಟ್ಟು | **66** | **78** | **68** | **23** | **10** | **11** | **256** |

**ಟಿಪ್ಪಣಿ : ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಇತರೇ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.**

## I **ಅರ್ಹತೆಗಳು** (ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ 23-10-2010 ರಂತೆ)

### 1. **ಶೈಕ್ಷಣಿಕ ವಿದ್ಯಾರ್ಹತೆ :**

***ಚಾಲಕ ಹುದ್ದೆಗೆ:***

ಅ. ಎಸ್ ಎಸ್ ಎಲ್ ಸಿ ವಿದ್ಯಾರ್ಹತೆಯಲ್ಲಿ ತೇರ್ಗಡೆಯಾಗಿರಬೇಕು.

ಆ. ನಿಗದಿತ ದೇಹದಾರ್ಢ್ಯತೆ ಹೊಂದಿರಬೇಕು.

ಇ. ಚಾಲ್ತಿಯಲ್ಲಿರುವ ಸರಕು ಸಾಗಾಣಿಕೆ/ಪ್ರಯಾಣಿಕರ ಭಾರಿ ವಾಹನ ಚಾಲನಾ ಪರವಾನಗಿ ಮತ್ತು ಕರ್ನಾಟಕ ಬ್ಯಾಡ್ಜ್ ಹೊಂದಿರಬೇಕು.

***ಚಾಲಕ-ವ-ನಿರ್ವಾಹಕ ಹುದ್ದೆಗೆ :***

ಅ. ಎಸ್ ಎಸ್ ಎಲ್ ಸಿ ಅಥವ ತತ್ಸಮಾನ ವಿದ್ಯಾರ್ಹತೆಯಲ್ಲಿ ತೇರ್ಗಡೆಯಾಗಿರಬೇಕು. (ಮುಕ್ತ ವಿಶ್ವ ವಿದ್ಯಾಲಯದಿಂದ ವಿತರಿಸಿರುವ 500 ಅಂಕಗಳ ಎಸ್‌ಎಸ್‌ಸಿ ವಿದ್ಯಾರ್ಹತೆಯ ಅಂಕಪಟ್ಟಿಯನ್ನು ಪರಿಗಣಿಸಲಾಗುವುದಿಲ್ಲ.)

ಆ. ನಿಗದಿತ ದೇಹದಾರ್ಢ್ಯತೆ ಹೊಂದಿರಬೇಕು.

ಇ. ಚಾಲ್ತಿಯಲ್ಲಿರುವ ಸರಕು ಸಾಗಾಣಿಕೆ/ಪ್ರಯಾಣಿಕರ ಭಾರಿ ವಾಹನ ಚಾಲನಾ ಪರವಾನಗಿ ಮತ್ತು ಕರ್ನಾಟಕ ಬ್ಯಾಡ್ಜ್ ಹೊಂದಿರಬೇಕು.

ಈ. ಚಾಲ್ತಿಯಲ್ಲಿರುವ ನಿರ್ವಾಹಕ ಪರವಾನಗಿ ಮತ್ತು ಕರ್ನಾಟಕ ಬ್ಯಾಡ್ಜ್ ಹೊಂದಿರಬೇಕು.

### 2. **ವಯೋಮಿತಿ :**

ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ 23-10-2010 ರಂದು,

ಅ. ಕನಿಷ್ಠ 24 ವರ್ಷಗಳು ಪೂರ್ಣಗೊಂಡಿರಬೇಕು.

ಆ. ಗರಿಷ್ಠ ವಯೋಮಿತಿ ಈ ಕೆಳಕಾಣಿಸಿದಂತೆ ವಯಸ್ಸು ಮೀರಿರಬಾರದು.

| ವರ್ಗ | ವಯಸ್ಸು |
|---|---|
| **ಸಾಮಾನ್ಯ ವರ್ಗ** | 35 ವರ್ಷಗಳು |
| **2ಎ/2ಬಿ/3ಎ/3ಬಿ** | 38 ವರ್ಷಗಳು |
| **ಪ.ಜಾತಿ/ಪ.ಪಂ/ ವರ್ಗ-1** | 40 ವರ್ಷಗಳು |

ಇ. ಇಲಾಖಾ ಅಭ್ಯರ್ಥಿಗಳು ಅವರ ಸೇವಾವಧಿಯ ಗರಿಷ್ಠ 10 ವರ್ಷಗಳಿಗೆ ಮೀರದಂತೆ ವಯೋಮಿತಿ ರಿಯಾಯಿತಿಗೆ ಅರ್ಹರು ಆದರೆ ಅವರ ವಯಸ್ಸು 45 ವರ್ಷ ಮೀರಿರಬಾರದು.

ಈ. ಮಾಜಿ ಸೈನಿಕ ಅಭ್ಯರ್ಥಿಯು ಭಾರತದ ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸಿ, ಮಾಜಿ ಸೈನಿಕ ಎಂಬುದಕ್ಕೆ ಅರ್ಹ ಪ್ರಮಾಣಪತ್ರವನ್ನು ಹೊಂದಿದ್ದರೆ, ಅವರು ಸಲ್ಲಿಸಿದ ಸೇವೆಯ ಜೊತೆಗೆ ಮೂರು ವರ್ಷಗಳ ವಯೋಮಿತಿಯ ರಿಯಾಯಿತಿಗೆ ಅರ್ಹರು ಆದರೆ ಅವರ ವಯಸ್ಸು 45 ವರ್ಷ ಮೀರಿರಬಾರದು.

ಉ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ಯಾವುದೇ ಸಂಸ್ಥೆಯಲ್ಲಿ ಕನಿಷ್ಟ ಮೂರು ವರ್ಷಗಳ ಕಾಲ, ಚಾಲಕ, ನಿರ್ವಾಹಕ ಅಥವ ಚಾಲಕ-ವ-ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸಿರುವ ಗೃಹ ರಕ್ಷಕ ದಳದ ಅಭ್ಯರ್ಥಿಗಳು, ಅವರು ಕರ್ತವ್ಯ ನಿರ್ವಹಿಸಿರುವ ಪ್ರತಿ ಒಂದು ವರ್ಷದ ಸೇವಾವಧಿಗೆ ಒಂದು ವರ್ಷ ವಯೋಮಿತಿಯ ರಿಯಾಯಿತಿಗೆ ಅರ್ಹರು, ಆದರೆ ಅವರ ವಯಸ್ಸು 45 ವರ್ಷ ಮೀರಿರಬಾರದು.

### 3. **ದೇಹದಾರ್ಢ್ಯತೆ :**

ಎರಡೂ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಈ ಕೆಳಕಂಡ ಕನಿಷ್ಠ ದೇಹದಾರ್ಢ್ಯತೆಯನ್ನು ಕಡ್ಡಾಯವಾಗಿ ಹೊಂದಿರಬೇಕು.

| | ಪುರುಷರು | ಮಹಿಳೆಯರು |
|---|---|---|
| ಎತ್ತರ | 160 ಸೆಂ.ಮೀ | 150 ಸೆ.ಮೀ |
| ತೂಕ | 50 ಕೆ.ಜಿ | 45 ಕೆ.ಜಿ |

## II **ಮೀಸಲಾತಿಗಳು**

1. **ಜಾತಿ/ವರ್ಗ ಮೀಸಲಾತಿ** : ಈ ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು

ಅ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ-ಡಿ ರಲ್ಲಿ,

ಆ. ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ-ಇ ರಲ್ಲಿ,

ಇ. ಪ್ರವರ್ಗ–2ಎ, 2ಬಿ, 3ಎ, ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ನಮೂನೆ –ಎಫ್ ರಲ್ಲಿ ,
ಚಾಲ್ತಿಯಲ್ಲಿರುವ ಹಾಗೂ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ 23–10–2010 ರೊಳಗಾಗಿ ಪಡೆದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಹೊಂದಿದ್ದಲ್ಲಿ ಮಾತ್ರ ಆಯಾ ಗುಂಪಿನ ಮೀಸಲಾತಿ ಸೌಲಭ್ಯಕ್ಕೆ ಅರ್ಹರಿರುತ್ತಾರೆ (ನಮೂನೆ–ಡಿ,ಇ ಮತ್ತು ಎಫ್ ಪ್ರಮಾಣಪತ್ರಗಳ ನಮೂನೆಗಳನ್ನು ನಿಗಮದ ವೆಬ್‌ಸೈಟ್‌ನಲ್ಲಿ ಭಿತ್ತರಿಸಲಾಗಿದೆ).
**(ವಿದ್ಯಾಭ್ಯಾಸ/ಶಿಕ್ಷಣಕ್ಕಾಗಿ/ಸರ್ಕಾರಿ ಸೌಲಭ್ಯಕ್ಕಾಗಿ ಅಥವ ಸಾಲಕ್ಕಾಗಿ ಪಡೆದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ).**

(ಸೂಚನೆ : ಪರಿವಾರ, ತಳವಾರ, ಮಾಲೇರು, ಕುರುಬ, ಬೆಸ್ತ ಜಾತಿಗೆ ಸೇರಿದ ಅಭ್ಯರ್ಥಿಗಳು ಪರಿಶಿಷ್ಠ ಪಂಗಡದ ನಾಯಕ, ಮಾಲೇರು, ಕಾಡು ಕುರುಬ, ಜೇನು ಕುರುಬ, ಗೊಂಡ, ರಾಜ್‌ಗೊಂಡ, ಕೋಳಿದೋರ ಮತ್ತು ಟೋಕ್ರಿ ಕೋಳಿ ಎಂದು ಜಾತಿ ಪ್ರಮಾಣ ಪತ್ರ ಪಡೆದಿದ್ದಲ್ಲಿ ಅವುಗಳು ಅಸಿಂದುವಾಗುತ್ತವೆ. ಆದುದರಿಂದ ಪರಿಶಿಷ್ಠ ಪಂಗಡದ ನಾಯಕ, ಮಾಲೇರು, ಕಾಡು ಕುರುಬ, ಜೇನು ಕುರುಬ, ಗೊಂಡ, ರಾಜ್‌ಗೊಂಡ, ಕೋಳಿದೋರ ಮತ್ತು ಟೋಕ್ರಿ ಕೋಳಿ ಜಾತಿಗೆ ಸೇರಿದ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ ; ಎಸ್‌ಡಬ್ಲ್ಯೂ/713/ಎಸ್‌ಎಡಿ/93 ದಿನಾಂಕ 11/03/2002 ರನ್ವಯ ದಿನಾಂಕ 11/03/2002 ರ ನಂತರ ಹಾಗೂ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದ ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು).

## 2. ಗ್ರಾಮೀಣ ಮೀಸಲಾತಿ

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ : 08 : ಸೆನೆನಿ : 2001 ದಿನಾಂಕ 13/02/2001 ರಂತೆ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಾವಳಿಗಳನ್ವಯ 1ನೇ ತರಗತಿಯಿಂದ 10ನೇ ತರಗತಿಯವರಗೆ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು.

ಅ. ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, 2ಎ, 2ಬಿ, 3ಎ ಹಾಗೂ 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಪ್ರಮಾಣ ಪತ್ರವನ್ನು ನಮೂನೆ–2 ರಲ್ಲಿ ಸಂಬಂದಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ ಪಡೆದ ಪ್ರಮಾಣ ಪತ್ರದ ಮೇಲೆ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಯ ಮೇಲು ಸಹಿ ಮಾಡಿಸಿದ್ದಲ್ಲಿ ಮಾತ್ರ ಗ್ರಾಮೀಣ ಮೀಸಲಾತಿಗೆ ಅರ್ಹರಾಗುವರು.

ಆ. ಗ್ರಾಮೀಣ ಮೀಸಲಾತಿ ಕೋರ ಬಯಸುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಮೇಲೆ ತಿಳಿಸಿದಂತೆ ನಮೂನೆ–2 ರ ಜೊತೆಗೆ ಮೇಲುಸ್ತರಕ್ಕೆ ಸೇರಿಲ್ಲದ ಬಗ್ಗೆ ನಮೂನೆ–1 ರಲ್ಲಿ ಸಂಬಂದಪಟ್ಟ ತಹಸೀಲ್ದಾರರಿಂದ ಪಡೆದ ಪ್ರಮಾಣ ಪತ್ರವನ್ನು ಹೊಂದಿರಬೇಕು. (ಇತರೆ ನಮೂನೆಗಳಲ್ಲಿ ಸ್ವೀಕರಿಸಲ್ಪಡುವ ಮೀಸಲಾತಿ ಪ್ರಮಾಣಪತ್ರಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಂತಹವರು ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ. (ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಸಂಸ್ಥೆಯ ವೆಬ್ ಸೈಟ್‌ನಲ್ಲಿ ಭಿತ್ತರಿಸಲಾಗಿದೆ).
**(ನಗರಾಭಿವೃದ್ಧಿ ಇಲಾಖೆಯಿಂದ ಹೊರಡಿಸಲಾಗಿರುವ ಸರ್ಕಾರದ ಆದೇಶವನ್ನು ಸಂಸ್ಥೆಯ ವೆಬ್ ಸೈಟ್‌ನಲ್ಲಿ ಭಿತ್ತರಿಸಲಾಗಿದ್ದು, ಸದರಿ ಆದೇಶದಲ್ಲಿನ ಮಾಹಿತಿಯ ಆಧಾರದ ಮೇಲೆ ಗ್ರಾಮೀಣ ಮೀಸಲಾತಿ ಸೌಲಭ್ಯವನ್ನು ನೀಡಲಾಗುವುದು).**

## 3. ಕನ್ನಡ ಮಾಧ್ಯಮ :

ಅಭ್ಯರ್ಥಿಯು 1ನೇ ತರಗತಿಯಿಂದ 10ನೇ ತರಗತಿಯವರಗೆ ಎಲ್ಲಾ ತರಗತಿಗಳನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ, ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ/71/ಸೆನೆನಿ/2001 ದಿನಾಂಕ 24–10–2002 ರನ್ವಯ ನಿಗಧಿತ ನಮೂನೆಯಲ್ಲಿ ಸಂಬಂದಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ ಸಹಿ ಹಾಗು ಮೊಹರು ಪಡೆದ ಪ್ರಮಾಣ ಪತ್ರ ಹೊಂದಿದ್ದಲ್ಲಿ ಮಾತ್ರ ಕನ್ನಡ ಮಾಧ್ಯಮ ಮೀಸಲಾತಿಗೆ ಅರ್ಹರಾಗುತ್ತಾರೆ. (ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಸಂಸ್ಥೆಯ ವೆಬ್ ಸೈಟ್‌ನಲ್ಲಿ ಭಿತ್ತರಿಸಲಾಗಿದೆ).

## 4. ಯೋಜನಾ ನಿರಾಶ್ರಿತರು :

ಸರ್ಕಾರದ ಆದೇಶ ಸಂಖ್ಯೆ :ಸಿಆಸುಇ/23/ಸೆನೆನಿ/99, ದಿನಾಂಕ 23/11/2000 ರಲ್ಲಿ ಸೂಚಿಸಿರುವಂತೆ ಯೋಜನಾ ನಿರಾಶ್ರಿತರ ಮೀಸಲಾತಿಗೆ ಅರ್ಹ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಅಧಿಕೃತ ಪ್ರಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರದಲ್ಲಿ ಯಾವುದಾದರೂ ಒಂದು ಐಟಂ ಸಂಪೂರ್ಣವಾಗಿ ಭರ್ತಿ ಮಾಡಿದ ಪಕ್ಷದಲ್ಲಿ ಮಾತ್ರ ಯೋಜನಾ ನಿರಾಶ್ರಿತರ ಮೀಸಲಾತಿಗೆ

ಅರ್ಹರಿರುತ್ತಾರೆ. (ಈ ಪ್ರಮಾಣ ಪತ್ರದ ನಮೂನೆಗಳನ್ನು ಸಂಸ್ಥೆಯ ವೆಬ್ ಸೈಟ್‌ನಲ್ಲಿ ಭಿತ್ತರಿಸಲಾಗಿದೆ).

5. **ಮಾಜಿ ಸೈನಿಕ :**

ಮಾಜಿ ಸೈನಿಕ ಅಭ್ಯರ್ಥಿಯು ಭಾರತದ ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸಿರುವ ಬಗ್ಗೆ ಅಧಿಕೃತ ಡಿಸ್ ಚಾರ್ಜ್ ಪುಸ್ತಕವನ್ನು ಅಥವ ಮಾಜಿ ಸೈನಿಕ ಎಂಬುದರ ಬಗ್ಗೆ ಸಂಬಂದಪಟ್ಟ ಅಧಿಕಾರಿಗಳಿಂದ ವಿತರಿಸಲ್ಪಟ್ಟಿರುವ ಅಧಿಕೃತ ದಾಖಲೆಗಳನ್ನು ಹೊಂದಿರಬೇಕು.

6. **ಗೃಹ ರಕ್ಷಕ ದಳ :**

ಉಚ್ಚನ್ಯಾಯಾಲಯವು, ಡಬ್ಲ್ಯೂಪಿ ಸಂಖ್ಯೆ 11286/06ಕ್ಕೆ ಸಂಬಂದಿಸಿದಂತೆ ಆದೇಶದ ದಿನಾಂಕ 17–01–2008 ರಲ್ಲಿ ವೈಟೇಜ್(Weightage) ನೀಡಲು ನಿರ್ದೇಶಿಸಿರುವ ಹಿನ್ನಲೆಯಲ್ಲಿ, ಒಂದು ಬಾರಿಯ ನೇಮಕಾತಿಗೆ ಸೀಮಿತಗೊಂಡಂತೆ, ಕ ರಾ ರ ಸಾರಿಗೆಯ ಯಾವುದೇ ನಾಲ್ಕೂ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಕನಿಷ್ಟ ಮೂರು ವರ್ಷಗಳ ಕಾಲ ಚಾಲಕ, ನಿರ್ವಾಹಕ ಅಥವ ಚಾಲಕ–ವ–ನಿರ್ವಾಹಕ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರುವ ಗೃಹ ರಕ್ಷಕದಳದ ಅಭ್ಯರ್ಥಿಗಳು, ಅವರು ಕರ್ತವ್ಯ ನಿರ್ವಹಿಸಿರುವ ಪ್ರತಿ ಒಂದು ವರ್ಷದ ಸೇವಾವಧಿಗೆ ಒಂದು ವರ್ಷ ವಯೋಮಿತಿಯ ರಿಯಾಯಿತಿಗೆ ಅರ್ಹರು ಆದರೆ ಅವರ ವಯಸ್ಸು 45 ವರ್ಷ ಮೀರಿರಬಾರದು. ಅಲ್ಲದೆ ಚಾಲನಾ ವೃತ್ತಿ ಪರೀಕ್ಷೆಯಲ್ಲಿ ಉತ್ತೀರ್ಣರಾದಲ್ಲಿ, ಅವರು ಸೇವೆ ಸಲ್ಲಿಸಿರುವ ಪ್ರತಿ ಒಂದು ವರ್ಷದ ಸೇವಾವಧಿಗೆ ಒಂದು ಅಂಕವನ್ನು ಕೃಪಾಂಕವಾಗಿ ಪಡೆಯಲು ಅರ್ಹರಿರುತ್ತಾರೆ. ಉಳಿದಂತೆ ಆಯಾ ಹುದ್ದೆಗಳಿಗೆ ನಿಗಧಿಪಡಿಸಿರುವ ಎಲ್ಲಾ ಇನ್ನಿತರೆ ಅರ್ಹತೆಗಳನ್ನು ಪೂರೈಸಬೇಕಾಗುತ್ತದೆ.

ಸದರಿ ರಿಯಾಯಿತಿಯನ್ನು ಕೋರ ಬಯಸುವ ಗೃಹರಕ್ಷಕ ದಳದವರು, ಚಾಲಕ, ನಿರ್ವಾಹಕ ಅಥವ ಚಾಲಕ–ವ–ನಿರ್ವಾಹಕ ಹುದ್ದೆಯಲ್ಲಿ ಯಾವ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುವರೋ ಸದರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಯವರಿಂದ ಈ ರೀತಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ಸೇವಾ ಪ್ರಮಾಣಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗಾಗಿ ಹೊಂದಿರಬೇಕು.

## III ನಿಗಧಿತ ಶುಲ್ಕ

ಅ. **ಶುಲ್ಕ ಪಾವತಿ ಮಾಡುವ ರೀತಿ ಹಾಗೂ ಬ್ಯಾಂಕಿನ ವಿವರ :**

www.ksrtcjobs.com ನಲ್ಲಿ ದೊರೆಯುವ ನಿಗಧಿತ ಬ್ಯಾಂಕ್ ಚಲನ್‌ನ್ನು ON LINE ಮೂಲಕ ಮುದ್ರಿಸಿಕೊಂಡು ಈ ಕೆಳಗೆ ನಮೂದಿಸಿರುವ ಅರ್ಜಿ ಶುಲ್ಕವನ್ನು ಕರ್ನಾಟಕ ರಾಜ್ಯದ ಯಾವುದಾದರೂ "ಸ್ಟೇಟ್ ಬ್ಯಾಂಕ್ ಆಫ್ ಮೈಸೂರು" (State Bank of Mysore) ಶಾಖೆಯಲ್ಲಿ ಮಾತ್ರ ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, (CAO-FA, KSRTC) ಕರಾರಸಾ ನಿಗಮ, ಬೆಂಗಳೂರು ರವರ ಖಾತೆಗೆ ಪಾವತಿಸಬೇಕು. ಪಾವತಿ ಮಾಡಿದ ನಂತರ ಬ್ಯಾಂಕಿನಿಂದ ನೀಡುವ Sl.No/Journal No ನ್ನು ON LINE ಅರ್ಜಿಯಲ್ಲಿ ತಪ್ಪದೇ ನಮೂದಿಸತಕ್ಕದ್ದು.

ಆ. **ಶುಲ್ಕದ ವಿವರ**

| ವರ್ಗ | ಒಂದು ಹುದ್ದೆಗೆ | ಎರಡೂ ಹುದ್ದೆಗೆ |
|---|---|---|
| ಸಾಮಾನ್ಯ ವರ್ಗ, 2ಎ, 2ಬಿ, 3ಎ ಮತ್ತು 3ಬಿ | ರೂ. 300/– | ರೂ. 600/– |
| ಪ.ಜಾತಿ, ಪ.ಪಂಗಡ, ವರ್ಗ–1, ಮಾಜಿ ಸೈನಿಕ ಮತ್ತು ಅಶಕ್ತ ಮಾಜಿ ಸೈನಿಕರ ಅವಲಂಬಿತರಿಗೆ | ರೂ. 150/– | ರೂ. 300/– |

ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ ಅಥವ ಅದನ್ನು ಸಂಸ್ಥೆಯು ನಡೆಸುವ ಇತರೆ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

## IV ಅರ್ಜಿಯನ್ನು ಸಲ್ಲಿಸುವ ವಿಧಾನ ಮತ್ತು ಕೊನೆಯ ದಿನಾಂಕ

ಅ. ಅರ್ಜಿಯನ್ನು ಕಡ್ಡಾಯವಾಗಿ ಆನ್ ಲೈನ್ ಮುಖಾಂತರವೇ ಕ ರಾ ರ ಸಾ ನಿಗಮದ ವೆಬ್ ಸೈಟ್ www.ksrtcjobs.com ಮೂಲಕ ಸಲ್ಲಿಸಬೇಕು.

ಆ. ದಿನಾಂಕ 24–09–2010 ರಿಂದ 23–10–2010 ರವರಗೆ ವೆಬ್ ಸೈಟ್ ತೆರೆದಿರುತ್ತದೆ. ಅರ್ಜಿಗಳನ್ನು ದಿನಾಂಕ 23–10–2010 ಸಂಜೆ 17:30 ಗಂಟೆಯೊಳಗೆ ಆನ್ ಲೈನ್‌ನಲ್ಲಿ ಭರ್ತಿ ಮಾಡಿ ಸಲ್ಲಿಸಬಹುದಾಗಿರುತ್ತದೆ.

ಇ. ನಿಗದಿತ ಕೊನೆಯ ದಿನಾಂಕ ಮತ್ತು ಸಮಯದ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಈ ಅಭ್ಯರ್ಥಿಗಳು ಕೇವಲ ಒಂದು ಬಾರಿ ಮಾತ್ರ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣದಿಂದಲೂ ತಿದ್ದುಪಡಿ ಮಾಡಲು ಅವಕಾಶ ಇರುವುದಿಲ್ಲ.

ಊ. ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ತಕ್ಷಣ ಅರ್ಜಿಯಲ್ಲಿ ನಮೂದಿಸಿದ ವಿವರಗಳ ಆಧಾರದ ಮೇಲೆ ನೀಡುವ ನೋಂದಣಿ ಸಂಖ್ಯೆಯು, ಅರ್ಜಿಯ ಡೌನ್ ಲೋಡ್ ಪ್ರತಿಯನ್ನು ಮುದ್ರಿಸಿಕೊಂಡು ಅದರಲ್ಲಿ ತಮ್ಮ ಇತ್ತೀಚಿನ ಭಾವಚಿತ್ರವನ್ನು ಅಂಟಿಸಿ ತಮ್ಮೊಂದಿಗೆ ಇಟ್ಟುಕೊಳ್ಳುವುದು ಹಾಗೂ ಪರಿಶೀಲನಾ ಸಮಯದಲ್ಲಿ ಇವುಗಳನ್ನು ಹಾಜರುಪಡಿಸುವುದು.

## V ಆಯ್ಕೆ ವಿಧಾನ

ಅಭ್ಯರ್ಥಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ ಅರ್ಜಿಯಲ್ಲಿ ನಮೂದಿಸಿದ ವಿವರಗಳ ಆಧಾರದ ಮೇಲೆ ಮೂಲದಾಖಲಾತಿಗಳ ಪರಿಶೀಲನೆ/ಚಾಲನಾ ವೃತ್ತಿ ಪರೀಕ್ಷೆಗೆ ಹಾಜರಾಗಲು ಕರೆಪತ್ರವನ್ನು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ತಕ್ಷಣ ನೀಡುವ ನೋಂದಣಿ ಸಂಖ್ಯೆಯನ್ನು ನಮೂದಿಸಿ **ಮುಂದೆ ತಿಳಿಸಲಾಗುವ ದಿನಾಂಕಗಳಲ್ಲಿ ಚಾಲನಾ ವೃತ್ತಿ ಪರೀಕ್ಷೆ ಹಾಗೂ ಮೂಲ ದಾಖಲಾತಿಗಳ ಪರಿಶೀಲನೆಗೆ** ಕರೆಪತ್ರವನ್ನು ಮುದ್ರಿಸಿಕೊಳ್ಳಬಹುದಾಗಿರುತ್ತದೆ. ಈ ಕರೆಪತ್ರದಲ್ಲಿ ಅಭ್ಯರ್ಥಿಗಳು ಮೂಲದಾಖಲಾತಿಗಳ ಪರಿಶೀಲನೆ/ಚಾಲನಾವೃತ್ತಿ ಪರೀಕ್ಷೆಗೆ ಹಾಜರಾಗಬೇಕಾದ ದಿನಾಂಕ, ಸ್ಥಳ ಹಾಗೂ ಯಾವ ದಾಖಲಾತಿಗಳನ್ನು ಪರಿಶೀಲನೆಗೆ ಸಲ್ಲಿಸಬೇಕೆಂಬ ಮಾಹಿತಿಯು ಲಭ್ಯವಿರುತ್ತದೆ.

ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಜರಾದ ಅಭ್ಯರ್ಥಿಗಳ ಪೈಕಿ ಹುದ್ದೆಗೆ ನಿಗದಿಪಡಿಸಲಾದ ಎಲ್ಲಾ ಅರ್ಹತೆಗಳನ್ನು ಹೊಂದಿರುವ ಅರ್ಹ ಅಭ್ಯರ್ಥಿಗಳಿಗೆ ಸಂಸ್ಥೆಯ ವತಿಯಿಂದ ಒಟ್ಟು 50 ಅಂಕಗಳಿಗೆ, ತಲಾ 25 ಅಂಕಗಳಂತೆ ಎರಡು ಸಲ ಚಾಲನಾ ಸಾಮರ್ಥ್ಯ ವೃತ್ತಿ ಪರೀಕ್ಷೆಯನ್ನು ಗಣಕೀಕೃತ ಟ್ರ್ಯಾಕ್‌ನಲ್ಲಿ ನಡೆಸಲಾಗುವುದು. ಸದರಿ ಪರೀಕ್ಷೆಯಲ್ಲಿ ಕನಿಷ್ಟ 20 ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಮಾತ್ರ ಉತ್ತೀರ್ಣರೆಂದು ತೀರ್ಮಾನಿಸಿ ಆಯ್ಕೆಗೆ ಪರಿಗಣಿಸಲಾಗುವುದು.

**ಅ. ಚಾಲಕ ಹುದ್ದೆ** ; ಚಾಲನಾ ವೃತ್ತಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆದಾರದ ಮೇರೆಗೆ ಮತ್ತು ಜಾರಿಯಲ್ಲಿರುವ ಮೀಸಲಾತಿಗಳ ನಿಯಮಾನುಸಾರ ಅರ್ಹತೆಯ ಆದಾರದ ಮೇರೆಗೆ ಆಯ್ಕೆ ಮಾಡಲಾಗುವುದು.

**ಆ. ಚಾಲಕ-ವ-ನಿರ್ವಾಹಕ** : ಚಾಲನಾ ವೃತ್ತಿ ಪರೀಕ್ಷೆಯಲ್ಲಿ ಪಡೆದ ಅಂಕಗಳಿಗೆ ಅವರು ಎಸ್ ಎಸ್ ಎಲ್ ಸಿ ಅಥವ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಶೇಕಡಾವಾರು ಅಂಕಗಳ ಶೇಕಡ 50 ಅಂಕಗಳನ್ನು ಸೇರಿಸಿ ಒಟ್ಟಾರೆ ಅಂಕಗಳ ಆಧಾರದ ಮೇರೆಗೆ ಮತ್ತು ಜಾರಿಯಲ್ಲಿರುವ ಮೀಸಲಾತಿ ನಿಯಮಾನುಸಾರ ಅರ್ಹತೆಯ ಮೇರೆಗೆ ಆಯ್ಕೆ ಮಾಡಲಾಗುವುದು.

ಸೂಚನೆ: ಚಾಲಕ ನಿರ್ವಾಹಕ ಅಥವ ಚಾಲಕ-ವ-ನಿರ್ವಾಹಕ ಹುದ್ದೆಯಲ್ಲಿ ಕ ರಾ ರ ಸಾರಿಗೆಯ ಯಾವುದೇ ನಾಲ್ಕೂ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಕನಿಷ್ಟ ಮೂರು ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿರುವ ಗೃಹ ರಕ್ಷಕದಳದ ಅಭ್ಯರ್ಥಿಗಳು ಚಾಲನಾ ವೃತ್ತಿ ಪರೀಕ್ಷೆಯಲ್ಲಿ ಉತ್ತೀರ್ಣರಾದಲ್ಲಿ, ಅವರು ಸೇವೆ ಸಲ್ಲಿಸಿರುವ ಪ್ರತಿ ಒಂದು ವರ್ಷದ ಸೇವಾವಧಿಗೆ ಒಂದು ಅಂಕವನ್ನು ಕೃಪಾಂಕವನ್ನಾಗಿ ಅಂತಿಮ ಮೆರಿಟ್‌ಗೆ ಸೇರಿಸಿ ಸದರಿ ಮೆರಿಟ್‌ನ್ನು ಆಯ್ಕೆಗೆ ಪರಿಗಣಿಸಲಾಗುವುದು.)

## VI ತರಬೇತಿ ಅವದಿ, ಭತ್ಯೆ ಹಾಗೂ ವೇತನ ಶ್ರೇಣಿ

ಅ. ಅರ್ಹ ಅಭ್ಯರ್ಥಿಗಳು ಮೇಲ್ಕಾಣಿಸಿದ ಹುದ್ದೆಗಳಿಗೆ ಆಯ್ಕೆಗೊಂಡಲ್ಲಿ ಎರಡು ವರ್ಷಗಳ ಕಾಲ ಕೆಲಸದ ಮೇಲೆ ತರಬೇತಿಗೆ ನಿಯೋಜಿಸಲಾಗುವುದು. ತರಬೇತಿ ಅವಧಿಯಲ್ಲಿ ಈ ಕೆಳಕಂಡಂತೆ ಮಾಸಿಕ ತರಬೇತಿ ಭತ್ಯೆಯನ್ನು ನೀಡಲಾಗುವುದು.

| ಹುದ್ದೆ | ಮೊದಲನೇ ವರ್ಷ | ಎರಡನೇ ವರ್ಷ |
|---|---|---|
| ಚಾಲಕ | 2800 | 3300 |
| ಚಾಲಕ-ವ-ನಿರ್ವಾಹಕ | 2500 | 3000 |

ಇ. ಮೇಲ್ಕಾಣಿಸಿದ ಮಾಸಿಕ ತರಬೇತಿ ಭತ್ಯೆಯ ಜೊತೆಗೆ ತಿಂಗಳಲ್ಲಿ ಕನಿಷ್ಟ 22 ದಿನಗಳು ವಾಸ್ತವಿಕ ಹಾಜರಾತಿ ಇದ್ದಲ್ಲಿ ರೂ.500/- ನ್ನು ಹಾಜರಾತಿ ಪ್ರೋತ್ಸಾಹ ಭತ್ಯೆಯನ್ನಾಗಿ ಮತ್ತು ಬೆಂಗಳೂರು ಹಾಗೂ ಮಂಗಳೂರು ಕೇಂದ್ರ ಸ್ಥಾನಗಳಲ್ಲಿ ಕಾರ್ಯ

ನಿರ್ವಹಿಸುವವರಿಗೆ ಮಾಸಿಕ ರೂ.500/- ಗಳನ್ನು ಪರಿಶ್ರಮ ಭತ್ಯೆಯನ್ನಾಗಿ ನೀಡಲಾಗುವುದು.

ಈ. ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷಗಳ ಕೆಲಸದ ಮೇಲೆ ತರಬೇತಿ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದವರನ್ನು ಖಾಯಂ ಪೂರ್ವ ಪರೀಕ್ಷಾರ್ಥಿ ಸೇವೆಯಲ್ಲಿ ನೇಮಕಗೊಳಿಸಿ 5660-90-5840-130-6620-170-7470-220-7910-280-8750-340-9430 ವೇತನ ಶ್ರೇಣಿಯಲ್ಲಿ ನಿಗಧಿಪಡಿಸಲಾಗುವುದು.

## VII ದಾಖಲಾತಿಗಳ ವಿವರ

ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವ ಅರ್ಹತೆ ಹಾಗೂ ಮೀಸಲಾತಿಗಳಿಗೆ ಅನುಗುಣವಾಗಿ ಈ ಕೆಳಕಂಡ ಮೂಲ ದಾಖಲಾತಿಗಳ ಪ್ರಮಾಣಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ಕೊನೆಯ ದಿನಾಂಕದೊಳಗೆ ಹೊಂದಿರಬೇಕು ಹಾಗೂ ಸಂಸ್ಥೆಯು ಅವುಗಳನ್ನು ಹಾಜರುಪಡಿಸಲು ಸೂಚಿಸಿದಾಗ ತಪ್ಪದೆ ಹಾಜರು ಪಡಿಸತಕ್ಕದ್ದು.

1. ಅರ್ಜಿ ಶುಲ್ಕ ಪಾವತಿ ಮಾಡಿರುವ ಬಗ್ಗೆ ಬ್ಯಾಂಕ್‌ನಿಂದ ನೀಡುವ ಚಲನ್‌ನ ಮೂಲ ಪ್ರತಿ.
2. ಎಸ್ ಎಸ್ ಎಲ್ ಸಿ ಅಥವ ತತ್ಸಮಾನ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಅಂಕಪಟ್ಟಿ.
3. ಜನ್ಮ ದಿನಾಂಕದ ದಾಖಲೆಗಾಗಿ ಜನ್ಮ ದಿನಾಂಕವುಳ್ಳ ಎಸ್ ಎಸ್ ಎಲ್ ಸಿ ಅಂಕಪಟ್ಟಿ /ಶಾಲಾ ವರ್ಗಾವಣಾ ಪತ್ರ.
4. ಚಾಲ್ತಿಯಲ್ಲಿರುವ ಸರಕು ಸಾಗಾಣಿಕೆ/ಪ್ರಯಾಣಿಕರ ಭಾರಿ ವಾಹನ ಚಾಲನಾ ಪರವಾನಗಿ ಮತ್ತು ಕರ್ನಾಟಕ ಬ್ಯಾಡ್ಜ್.
5. ಚಾಲ್ತಿಯಲ್ಲಿರುವ ನಿರ್ವಾಹಕ ಪರವಾನಗಿ ಮತ್ತು ಕರ್ನಾಟಕ ಬ್ಯಾಡ್ಜ್.(ಚಾಲಕ-ವ-ನಿರ್ವಾಹಕ ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ).
6. ಸೈನಿಕ ಸೇವೆಯಿಂದ ಬಿಡುಗಡೆಯಾಗಿ / ಮುಕ್ತಿ ಹೊಂದಿ ಮಾಜಿ ಸೈನಿಕ ಎಂಬುದಾಗಿ ನಿರ್ಧರಿಸಿರುವ ಬಗ್ಗೆ ಪ್ರಮಾಣಪತ್ರ.(ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ).
7. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ, ಹಾಗೂ 3ಬಿ ವರ್ಗಗಳ ಮೀಸಲಾತಿಯ ಚಾಲ್ತಿಯಲ್ಲಿರುವ ನಮೂನೆಯಲ್ಲಿನ ಪ್ರಮಾಣ ಪತ್ರಗಳು.(ಜಾತಿ/ವರ್ಗಗಳ ಮೀಸಲಾತಿ ಕೋರಿದ್ದಲ್ಲಿ).
8. ಗ್ರಾಮೀಣ ಅಭ್ಯರ್ಥಿ ಮೀಸಲಾತಿ ಪ್ರಮಾಣ ಪತ್ರ ನಮೂನೆ-1 ಮತ್ತು ನಮೂನೆ-2 ರ ಪ್ರತಿಗಳು(ಗ್ರಾಮೀಣ ಮೀಸಲಾತಿ ಕೋರಿದ್ದಲ್ಲಿ).
9. ಕನ್ನಡ ಮಾದ್ಯಮದಲ್ಲಿ ವ್ಯಾಸಂಗ ಮಾಡಿರುವ ಪ್ರಮಾಣ ಪತ್ರ. ( ಕನ್ನಡ ಮಾದ್ಯಮ ಮೀಸಲಾತಿ ಕೋರಿದ್ದಲ್ಲಿ).
10. ಇಲಾಖಾ ಅಭ್ಯರ್ಥಿಗಳು ಸಂಬಂದಪಟ್ಟ ನೇಮಕ ಪ್ರಾಧಿಕಾರಸ್ಥರಿಂದ ಪಡೆದ ಸೇವಾ ಪ್ರಮಾಣ ಪತ್ರ. (ಇಲಾಖಾ ಅಭ್ಯರ್ಥಿಯಾಗಿದ್ದಲ್ಲಿ).

## VIII ಸೂಚನೆಗಳು

1. ಒಬ್ಬ ಅಭ್ಯರ್ಥಿಯು ಒಂದು ಬಾರಿ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಮೊದಲು ಸಲ್ಲಿಸಿರುವ ಅರ್ಜಿ ಹಾಗೂ ಅದರಲ್ಲಿ ನಮೂದಿಸಿರುವ ಹುದ್ದೆಯನ್ನು ಮಾತ್ರ ಪರಿಗಣಿಸಿ ಒಂದು ಬಾರಿ ಮಾತ್ರ ಚಾಲನಾ ವೃತ್ತಿ ಪರೀಕ್ಷೆಯನ್ನು ನೀಡಲಾಗುವುದು.

2. ಒಂದೇ ಅಭ್ಯರ್ಥಿಯು ಚಾಲಕ ಹಾಗೂ ಚಾಲಕ-ವ-ನಿರ್ವಾಹಕ ಎರಡೂ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸಲು ಬಯಸಿದಲ್ಲಿ, ಒಂದೇ ಅರ್ಜಿಯಲ್ಲಿ ಎರಡೂ ಹುದ್ದೆಗಳನ್ನು ನಮೂದಿಸಿ, ಹುದ್ದೆಯ ಆದ್ಯತೆಯನ್ನು ಸ್ಪಷ್ಟವಾಗಿ ತಪ್ಪದೆ ತಿಳಿಸತಕ್ಕದ್ದು. ಹುದ್ದೆಯ ಆದ್ಯತೆಯನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಲಾಗುವುದಿಲ್ಲ ಹಾಗೂ ಎರಡೂ ಹುದ್ದೆಗಳಿಗೆ ಒಂದು ಬಾರಿ ಮಾತ್ರ ಚಾಲನಾ ವೃತ್ತಿ ಪರೀಕ್ಷೆಯನ್ನು ನಡೆಸಿ ಅದೇ ಅಂಕಗಳನ್ನು ಎರಡೂ ಹುದ್ದೆಗಳ ಆಯ್ಕೆಗೆ ಪರಿಗಣಿಸಲಾಗುವುದು.

**೩. ಹಿಂಬಾಕಿ ಹುದ್ದೆಗಳ ನೇಮಕಾತಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಂದೇ ಅಭ್ಯರ್ಥಿ ಎರಡೂ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಒಂದು ಬಾರಿ ಮಾತ್ರ ಚಾಲನಾ ವೃತ್ತಿ ಪರೀಕ್ಷೆಯನ್ನು ನಡೆಸಿ ಅದೇ ಅಂಕಗಳನ್ನು ಎರಡೂ ಹುದ್ದೆಗಳ ಆಯ್ಕೆಗೆ ಪರಿಗಣಿಸಲಾಗುವುದು.**

4. **ವಯೋಮಿತಿ ರಿಯಾಯಿತಿ ಮತ್ತು ವೃತ್ತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪಡೆದ ಅಂಕಗಳ ಜೊತೆಗೆ ಕೃಪಾಂಕ ಕೋರಬಯಸುವ ಗೃಹ ರಕ್ಷಕ ದಳದ ಅಭ್ಯರ್ಥಿಗಳು, ಗೃಹ ರಕ್ಷಕರಾಗಿ ಚಾಲಕ ನಿರ್ವಾಹಕ ಅಥವ ಚಾಲಕ–ವ–ನಿರ್ವಾಹಕ ಹುದ್ದೆಯಲ್ಲಿ, ಕನಿಷ್ಟ ಮೂರು ವರ್ಷ, ಕ ರಾ ರ ಸಾ ನಿಗಮದ ಯಾವುದೇ ನಾಲ್ಕು ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಬಗ್ಗೆ, ಸಂಬಂದಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿಯಿಂದ ವಿತರಿಸಲ್ಪಟ್ಟಿರುವ ಸೇವಾ ಪ್ರಮಾಣಪತ್ರವನ್ನು ಹೊಂದಿರಬೇಕು**.

5. ಚಾಲಕ–ವ–ನಿರ್ವಾಹಕ ಹುದ್ದೆಗೆ ಅಯ್ಕೆಗೊಂಡ ಅಭ್ಯರ್ಥಿಗಳು ಚಾಲಕ, ಚಾಲಕ–ವ–ನಿರ್ವಾಹಕ ಅಥವ ನಿರ್ವಾಹಕ ಈ ಮೂರು ಹುದ್ದೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಕರ್ತವ್ಯ ನಿರ್ವಹಿಸಬೇಕಾಗುತ್ತದೆ.

6. ನೈತಿಕ ದುರ್ನಡತೆಯಿಂದಾಗಿ/ನೀತಿಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವ ಈ ಸಂಸ್ಥೆಯಲ್ಲಿ ಅಥವ ರಾಜ್ಯ/ಕೇಂದ್ರ/ಸ್ಥಳೀಯ ಸಂಸ್ಥೆ/ಕೈಗಾರಿಕಾ/ವಾಣಿಜ್ಯಕ್ಕೆ ಸಂಬಂದಪಟ್ಟ ಅಥವ ರಾಜ್ಯ ಸಾರಿಗೆ ಅಧೀನದಲ್ಲಿರುವ ಕಛೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ/ನೀತಿಬಾಹಿರ ಚಟುವಟಿಕೆಗಳಲ್ಲಿ ಒಳಗಾಗಿ ಅಥವ ಆಯ್ಕೆಯಾದ ಅಭ್ಯರ್ಥಿಯು ಬದಲಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು ಬಾಹಿರ/ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ/ವಜಾ ಮಾಡಲ್ಪಟ್ಟಿದ್ದು ಕಂಡು ಬಂದಲ್ಲಿ ನೇಮಕಾತಿಗೆ ಅನರ್ಹರಾಗುತ್ತಾರೆ.

7. ಅರ್ಜಿಯಲ್ಲಿ ಸುಳ್ಳು ಮಾಹಿತಿ ನೀಡಿ ಅಥವ ನಕಲಿ ಪ್ರಮಾಣಪತ್ರ/ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆದಿರುವುದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಅವರನ್ನು ಯಾವುದೇ ಮುನ್ಸೂಚನೆ ನೀಡದೆ ಯಾವುದೇ ಸಮಯದಲ್ಲಾದರೂ ನೌಕರಿಯಿಂದ ವಜಾ ಮಾಡಲಾಗುವುದು ಜೊತೆಗೆ ಅವರ ವಿರುದ್ಧ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು.

8. ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು, ಎಲ್ಲಾ ಪತ್ರವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿಕೊಡಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.

9. ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯ ಪರೀಕ್ಷೆಗೆ ಹಾಜರಾಗಿ, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಫಲಿತಾಂಶ ಪ್ರಕಟವಾಗದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಂತಿಲ್ಲ.

10. ಅರ್ಹ ಅಭ್ಯರ್ಥಿಗಳು ಆನ್ ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡುವ ಮೊದಲು ವೆಬ್ ಸೈಟ್‌ನಲ್ಲಿರುವ ಸೂಚನೆಗಳನ್ನು/ವಿಧಾನವನ್ನು ತಿಳಿದುಕೊಳ್ಳುವುದು.

11. ಅಭ್ಯರ್ಥಿಗಳ ಅರ್ಹತೆಯ ವಿಷಯದಲ್ಲಿ ಕ ರಾ ರ ಸಾ ನಿಗಮದ ನಿರ್ಧಾರವೇ ಅಂತಿಮವಾಗಿರುತ್ತದೆ.

12. ಆಯ್ಕೆಗೊಂಡು ಸೇವೆಯಲ್ಲಿ ಖಾಯಂಗೊಳ್ಳುವ ಅಭ್ಯರ್ಥಿಗಳು ಉಪದಾನ ಪಾವತಿ ಕಾಯ್ದೆ 1972 ರನ್ವಯ ಉಪಧನ ಪಡೆಯಲು ಅರ್ಹರು.

13. ಎಸ್ ಎಸ್ ಎಲ್ ಸಿ ಅಥವ ತತ್ಸಮಾನ ಅಥವ ಮೇಲ್ದರ್ಜೆ ವಿದ್ಯಾರ್ಹತೆಯಲ್ಲಿ ಕನ್ನಡ ವಿಷಯವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಅಧ್ಯಯನ ಮಾಡದೆ ಇದ್ದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ನಿಗಮದ ವತಿಯಿಂದ ನಡೆಸಲಾಗುವ ಕನ್ನಡ ಭಾಷಾ ಜ್ಞಾನ ಪರೀಕ್ಷೆಯಲ್ಲಿ ಒಂದೇ ಅವಕಾಶದಲ್ಲಿ ಉತ್ತೀರ್ಣರಾಗಬೇಕು ಇಲ್ಲದಿದ್ದಲ್ಲಿ ಅವರ ಆಯ್ಕೆಯನ್ನು ರದ್ದುಗೊಳಿಸಲಾಗುವುದು.

14. ಅಭ್ಯರ್ಥಿಯು ಸಾರ್ವಜನಿಕ ಉದ್ದಿಮೆ ಅಥವ ಕರ್ನಾಟಕ ಸರ್ಕಾರ ಅಥವ ಕೇಂದ್ರ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಲ್ಲಿ ಅಂತಹ ಅಭ್ಯರ್ಥಿಯು ಸೂಕ್ತ ಪ್ರಾಧಿಕಾರಸ್ಥರಿಂದ ಆಕ್ಷೇಪಣೆ ಇಲ್ಲವೆಂಬ ಪತ್ರವನ್ನು ಹಾಜರುಪಡಿಸತಕ್ಕದ್ದು.

15. ಅಭ್ಯರ್ಥಿಯು ಯಾವುದೇ ವಿಧವಾದ ಪ್ರಚಾರ ಮಾಡುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಲ್ಲಿ ಯಾವ ಮುನ್ಸೂಚನೆ ನೀಡದೆ ಅವರನ್ನು ಆಯ್ಕೆಗೆ ಅನರ್ಹಗೊಳಿಸಲಾಗುವುದು.

16. ಚಾಲನಾ ವೃತ್ತಿ ಪರೀಕ್ಷೆ ನಡೆಸುವ ವಿಧಾನ, ವಿವರಗಳನ್ನು ನಿಗಮದ ವೆಬ್ ಸೈಟ್ www.ksrtcjobs.com ನಲ್ಲಿ ಪಡೆಯಬಹುದಾಗಿರುತ್ತದೆ.

17. ನೇಮಕಾತಿ ಪ್ರಕ್ರಿಯೆಗಳ ಬಗ್ಗೆ ಅಭ್ಯರ್ಥಿಗಳಿಂದ ಯಾವುದೇ ರೀತಿಯ ಪತ್ರ ವ್ಯವಹಾರ ಅಥವ ವಿಚಾರಣೆಗಳಿಗೆ ಆಸ್ಪದವಿರುವುದಿಲ್ಲ. ನೇಮಕಾತಿಯ ವಿವಿಧ ಹಂತಗಳಿಗೆ ಸಂಬಂದಿಸಿದ ಎಲ್ಲಾ ವಿವರಗಳನ್ನು ಸಂಸ್ಥೆಯ ವೆಬ್ ಸೈಟ್ www.ksrtcjobs.com ನಲ್ಲಿ ಲಭ್ಯವಿರುತ್ತದೆ.

18. ಅಯ್ಕೆಗೊಂಡ ಅಭ್ಯರ್ಥಿಗಳನ್ನು ಈ ಕೆಳಕಾಣಿಸಿದ ಕ ರಾ ರ ಸಾ ನಿಗಮದ ಯಾವುದೇ ವಿಭಾಗಗಳಿಗೆ ಮಾತ್ರ ನಿಯೋಜಿಸಲಾಗುವುದು.

| | | |
|---|---|---|
| ಬೆಂಗಳೂರು ಕೇಂದ್ರ | ಮೈಸೂರು ಗ್ರಾಮಾಂತರ | ದಾವಣಗೆರೆ |
| ರಾಮನಗರ | ಮಂಡ್ಯ | ಮಂಗಳೂರು |
| ಕೋಲಾರ | ಹಾಸನ | ಚಾಮರಾಜನಗರ |
| ಚಿಕ್ಕಬಳ್ಳಾಪುರ | ಚಿಕ್ಕಮಗಳೂರು | |
| ಮೈಸೂರು ನಗರ ಸಾರಿಗೆ | ತುಮಕೂರು | |

## IX ಅಭ್ಯರ್ಥಿಗಳಿಗೆ ವಿಶೇಷ ಸೂಚನೆಗಳು

1. **ಕರೆಪತ್ರಗಳನ್ನು ಮುದ್ರಿಸಿಕೊಳ್ಳಲು ಅಭ್ಯರ್ಥಿಗಳಿಗೆ ಅನುಕೂಲವಾಗುವಂತೆ ಪ್ರಕಟಣೆಯನ್ನು ಪ್ರಚಲಿತ ದಿನ ಪತ್ರಿಕೆಗಳಲ್ಲಿ ನೀಡಲಾಗುವುದು. ಅದರಂತೆ ನಿಮ್ಮ ಕರೆಪತ್ರಗಳನ್ನು ಸಂಸ್ಥೆಯ ವೆಬ್ ಸೈಟ್ www.ksrtcjobs.com ನ ಮುಖಾಂತರ ಮುದ್ರಿಸಿಕೊಂಡು ಸದರಿ ಕರೆ ಪತ್ರದಲ್ಲಿನ ಸೂಚನೆಗಳಂತೆ ಮೂಲ ದಾಖಲಾತಿಗಳ ಪರಿಶೀಲನೆ/ಚಾಲನಾ ವೃತ್ತಿ ಪರೀಕ್ಷೆಗೆ ಹಾಜರಾಗತಕ್ಕದ್ದು.**

2. **ನಿಮ್ಮ ಸ್ವ-ವಿಳಾಸವುಳ್ಳ ಹಾಗೂ ರೂ.5-00 ಬೆಲೆಯ ಸ್ಟ್ಯಾಂಪ್(ಅಂಚೆ ಚೀಟಿ)ನ್ನು ಅಂಟಿಸಿದ 25X14 ಸೆಂ.ಮೀ ಅಳತೆಯ ಎರಡು ಖಾಲಿ ಲಕೋಟೆಗಳನ್ನು ತಪ್ಪದೆ ಮೂಲ ದಾಖಲಾತಿಗಳ ಪರಿಶೀಲನೆಗೆ /ಚಾಲನಾವೃತ್ತಿ ಪರೀಕ್ಷೆಗೆ ಹಾಜರಾಗುವ ದಿನದಂದು ತಪ್ಪದೆ ಹಾಜರುಪಡಿಸತಕ್ಕದ್ದು.**

sd/-
**(ಮಾಜ್ ಅಹ್ಮದ್ ಷರೀಫ್)**
**ನಿರ್ದೇಶಕರು (ಸಿಬ್ಬಂದಿ & ಪರಿಸರ)**